# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 91 | Pages. 2 | Date: 10-03-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 91 - ಪುಟಗಳು : 2 | 10-03-2026 | ಮಂಗಳವಾರ | Ph: 8762954248 | ದರ : ₹1


## 1.48 ಕೋಟಿ ರೂ. ಹುಂಡಿ ಹಣ ಎನ್.ಆರ್. ಸಂತೋಷ್ ಮನೆಗೆ

# ಹಣ ವಾಪಸ್ ಸಿಗುವವರೆಗೆ ಹೋರಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅರಸಿಕೆರೆ ತಾಲ್ಲೂಕಿನ, ದುಮ್ಮೆನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಮ್ಮನಹಟ್ಟಿಯ ಶ್ರೀ ಗಂಗಮಳಮ್ಮ ದೇವಿ ದೇವಸ್ಥಾನದ ಹುಂಡಿ ಹಣವನ್ನು ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಮನೆಗೆ ತೆಗೆದುಕೊಂಡು ಹೋಗಿದ್ದಾರೆ ಎಂದು ಗ್ರಾಮಸ್ಥರು ಗಂಭೀರ ಆರೋಪ ಮಾಡಿದ್ದಾರೆ.

ಯುಗಾದಿ ಹಬ್ಬದ ಅಂಗವಾಗಿ ನಡೆಯಲಿರುವ ಜಾತ್ರೆ ಹಾಗೂ ದೇವಸ್ಥಾನದ ಕಾರ್ಯಗಳಿಗೆ ಬಳಸಬೇಕಿದ್ದ ಹುಂಡಿ ಹಣವನ್ನು ತಮ್ಮ ಟ್ರಸ್ಟ್ ಹೆಸರಿನಲ್ಲಿ ತೆಗೆದುಕೊಳ್ಳುವುದಾಗಿ ಹೇಳಿ ಎನ್.ಆರ್.ಸಂತೋಷ್ ಹಾಗೂ ಅವರ ಬೆಂಬಲಿಗರು 2025 ರ ಸೆಪ್ಟೆಂಬರ್ 14 ರಂದು ದೇವಸ್ಥಾನದ ಹುಂಡಿಯಲ್ಲಿ ಸಂಗ್ರಹವಾಗಿದ್ದ 1.48 ಕೋಟಿ ರೂ. ಹಣವನ್ನು ದೇವಸ್ಥಾನದ ಅಭಿವೃದ್ಧಿಗೆ ಬಳಸುವುದಾಗಿ ಹೇಳಿ ತೆಗೆದುಕೊಂಡು ಹೋಗಿದ್ದಾರೆ.

ಆ ಹಣವನ್ನು ಇನ್ನೂ ವಾಪಸ್ ನೀಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ದೇವಸ್ಥಾನದ ಹಣವನ್ನು ಮನೆಗೆ ತೆಗೆದುಕೊಂಡು ಹೋಗಿರುವ ಬಗ್ಗೆ ಸ್ಪಷ್ಟನೆ ನೀಡಬೇಕು ಹಾಗೂ ಹಣವನ್ನು ತಕ್ಷಣವೇ ಹಿಂದಿರುಗಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ದೇವಸ್ಥಾನದ ಹುಂಡಿ ಹಣ ಸಾರ್ವಜನಿಕರ ಸ್ವತ್ತು. ಇದು ಯಾರೊಬ್ಬರ ವೈಯಕ್ತಿಕ ಆಸ್ತಿ ಅಲ್ಲ. ನಮ್ಮ ಅನುಮತಿಯಿಲ್ಲದೆ ಮತ್ತೆ ಹುಂಡಿ ತೆರೆಯಲು ಪ್ರಯತ್ನಿಸಿದರೆ ಅದನ್ನು ಸಹಿಸುವುದಿಲ್ಲ, ದೇವಸ್ಥಾನದ ಹಣವನ್ನು ವಾಪಸ್ ಪಡೆಯುವವರೆಗೆ ಹೋರಾಟ ನಡೆಸುತ್ತೇವೆ ಎಂದು ಕಿಡಿಕಾರಿದ್ದಾರೆ.





### ರಾಜಕೀಯಕ್ಕಾಗಿ ಸುಳ್ಳು ಆರೋಪ ಎನ್.ಆರ್.ಸಂತೋಷ್

ಸೋಮವಾರ ರಾತ್ರಿ ಎನ್.ಆರ್.ಸಂತೋಷ್ ಬೆಂಬಲಿಗರು ಅರಸೀಕೆರೆ ಗ್ರಾಮಾಂತರ ಠಾಣೆ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂತೋಷ್, ನಾನು ಟ್ರಸ್ಟ್ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಹುಂಡಿ ಎಣಿಕೆ ಮಾಡಲಾಗಿತ್ತು. ಆ ಹಣವನ್ನು ನಾನು ಹೊತ್ತೊಯ್ದಿಲ್ಲ. ಆ ಹಣ ಬಳಸಿ ದೇವಾಲಯ ಅಭಿವೃದ್ಧಿಪಡಿಸಲು ಮುಂದಾಗಿದ್ದೆ. ಆದರೆ ರಾಜಕೀಯ ಕಾರಣಗಳಿಗಾಗಿ ನನ್ನ ವಿರುದ್ಧ ಸುಳ್ಳು ಆರೋಪ ಮಾಡಲಾಗುತ್ತಿದೆ. ಈ ಮೂಲಕ ನನ್ನ ತೇಜೋವಧೆ ಮಾಡಲಾಗುತ್ತಿದೆ. ಈ ಆಧಾರ ರಹಿತ ಆರೋಪಗಳನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಸಂತೋಷ್ ಬೆಂಬಲಿಗರ ಜಮಾವಣೆಯಿಂದ ಠಾಣೆಯ ಆವರಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

## ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಒತ್ತು : ಶಾಸಕ ಸಿಮೆಂಟ್ ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ : ಕ್ಷೇತ್ರದ ಗ್ರಾಮೀಣ ಪ್ರದೇಶಗಳಲ್ಲಿನ ಹಲವು ರಸ್ತೆಗಳು ಇನ್ನೂ ದುಸ್ಥಿತಿಯಲ್ಲಿದ್ದು, ಹಂತ ಹಂತವಾಗಿ ಕ್ರಿಯಾ ಯೋಜನೆ ರೂಪಿಸಿ ಅವುಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಹಲಸುಲಿಗೆ ಹಾಗೂ ಬಿರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿಯಾಗದೆ ವಾಹನ ಸಂಚಾರಕ್ಕೂ ಅಸೌಕರ್ಯವಾಗಿರುವ ರಸ್ತೆಗಳ ಕುರಿತು ಮಾಹಿತಿ ಸಂಗ್ರಹಿಸಲಾಗಿದೆ. ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ಅವುಗಳ ಅಭಿವೃದ್ಧಿಗೆ ಚಾಲನೆ ನೀಡಲಾಗುವುದು. ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ತರಲಾಗಿದ್ದು, ಇದರ ಫಲವಾಗಿ ಈಗ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಮತಕ್ಷೇತ್ರದ ಬಹುತೇಕ ಗ್ರಾಮಗಳಲ್ಲಿ ರಸ್ತೆ ಹಾಗೂ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಗುತ್ತಿದೆ ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಇನ್ನಷ್ಟು ಪ್ರಾಮಾಣಿಕವಾಗಿ ಶ್ರಮಿಸಲಾಗುವುದು ಎಂದರು.

ಬಿರಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 6 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಕಾಮಗಾರಿ, ಬಿರಡಹಳ್ಳಿ ಮುಖ್ಯ ರಸ್ತೆಯಿಂದ ರಾಮಗಿರಿ ಗ್ರಾಮದವರೆಗೆ 20 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ, ಹಾಗೆಯೇ ಬಹುದಶಕಗಳ ಬೇಡಿಕೆಯಾಗಿದ್ದ ಹಲಸುಲಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾಗಡಿ ಗ್ರಾಮದ ಪರಿಮಿತಿಯಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಕಾಮಗಾರಿ ವೇಳೆ ಗುತ್ತಿಗೆದಾರರು ರಸ್ತೆ ನಿರ್ಮಾಣದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಶಾಸಕರು ಸೂಚಿಸಿದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು, ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ವಿಜೇತರಿಗೆ ಶಾಸಕರ ಅಭಿನಂದನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಸಬಾ ಹೋಬಳಿ ಶಂಖ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದು, ಒಟ್ಟು 11 ಸ್ಥಾನಗಳ ಪೈಕಿ 7 ಸ್ಥಾನಗಳಲ್ಲಿ ಜಯಶೀಲರಾಗಿದ್ದಾರೆ.

ಈ ಫಲಿತಾಂಶ ಗ್ರಾಮದಲ್ಲಿ ಪಕ್ಷದ ಬಲವನ್ನು ಮತ್ತಷ್ಟು ಹೆಚ್ಚಿಸುವುದರ ಜೊತೆಗೆ ಮಹಿಳಾ ನಾಯಕತ್ವಕ್ಕೆ ಹೊಸ ಬಲ ನೀಡಿದೆ. ಚುನಾವಣೆಯಲ್ಲಿ ಜಯಗಳಿಸಿದ ಅಭ್ಯರ್ಥಿಗಳು ಗ್ರಾಮೀಣ ಮಟ್ಟದಲ್ಲಿ ಹಾಲು ಉತ್ಪಾದಕರ ಸಮಸ್ಯೆಗಳನ್ನು ಪರಿಹರಿಸುವುದು, ಸಂಘದ ಅಭಿವೃದ್ಧಿಗೆ ಕೆಲಸ ಮಾಡುವುದಾಗಿ ಭರವಸೆ ವ್ಯಕ್ತಪಡಿಸಿದ್ದಾರೆ.

ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಮುನ್ನಡೆಯುತ್ತಿರುವುದು ಗ್ರಾಮೀಣ ಸಮಾಜದ ಅಭಿವೃದ್ಧಿಗೆ ಮಹತ್ವದ ಹೆಜ್ಜೆಯಾಗಿದೆ. ಈ ಹಿನ್ನೆಲೆಯಲ್ಲಿ ಸೋಮವಾರ ಬೆಳಗ್ಗೆ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ತಮ್ಮ ನಿವಾಸದಲ್ಲಿ ಜಯಶೀಲರಾದ ಅಭ್ಯರ್ಥಿಗಳನ್ನು ಆತ್ಮೀಯವಾಗಿ ಅಭಿನಂದಿಸಿ ಶುಭಾಶಯ ಕೋರಿದರು.

ಈ ವೇಳೆ ಮಾತನಾಡಿದ ಶಾಸಕರು, ಮಹಿಳೆಯರು ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಸಂತೋಷದ ಸಂಗತಿ ಎಂದು ಹೇಳಿ, ಸಂಘದ ಅಭಿವೃದ್ಧಿಗೆ ಅಗತ್ಯವಾದ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಸನ್ಮಾನ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯರು ಉಪಸ್ಥಿತರಿದ್ದು, ಜಯಶೀಲರಾದ ಅಭ್ಯರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

## ಬಲವಂತದ ಭೂ ಸ್ವಾಧೀನ ಬೇಡ : ರೈತರ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ:ತಾಲ್ಲೂಕಿನ ಕಸಬಾ ಹೋಬಳಿ ಹೂವಿನಹಳ್ಳಿ ಮತ್ತು ಹೂವಿನಹಳ್ಳಿ ಕಾವಲು ಗ್ರಾಮಗಳ ಸುಮಾರು 387ಎಕರೆ ಫಲವತ್ತಾದ ಕೃಷಿ ಜಮೀನನ್ನು ವಸತಿ ಬಡಾವಣೆ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಗೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಗ್ರಾಮಸ್ಥರು, ಡಿಸಿ ಕಚೇರಿ ಎದುರು ಧರಣಿ ನಡೆಸಿ, ನಮ್ಮ ಜೀವನಾಧಾರ ಆಗಿರುವ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬಾರದು ಎಂದು ಒತ್ತಾಯಿಸಿ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಗಾಮಸ್ಥ ದೇವೇಗೌಡ, ಕಳೆದ ಜ.29 ರಂದು ಪ್ರಕಟವಾದ ಪ್ರಕಟಣೆಯಲ್ಲಿ ಕೆಹೆಚ್‌ಬಿ ವತಿಯಿಂದ ಒಟ್ಟು 387 ಎಕರೆ ಜಮೀನನ್ನು ವಸತಿ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆ ಬಗ್ಗೆ ತಿಳಿಸಲಾಗಿದೆ.



ಪ್ರಕಟಣೆ ಹೊರಬಿದ್ದ 60 ದಿನಗಳೊಳಗೆ ಲಿಖಿತ ಆಕ್ಷೇಪಣೆ ಸಲ್ಲಿಸಲು ಸೂಚಿಸಲಾಗಿದೆ. ಆದರೆ ಎರಡೂ ಗ್ರಾಮಗಳ ರೈತರು ಸಣ್ಣ ಹಿಡುವಳಿದಾರರು. ಕೃಷಿಯೇ ಅವರ ಜೀವನದ ಮುಖ್ಯ ಆಧಾರವಾಗಿದೆ. ಈ ಜಮೀನು ಅತ್ಯಂತ ಫಲವತ್ತಾಗಿದ್ದು, ಇಲ್ಲಿ ಜೋಳ, ರಾಗಿ, ಆಲೂಗೆಡ್ಡೆ ಸೇರಿ ವಿವಿಧ ತರಕಾರಿ ಬೆಳೆಯುವುದರ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಅದೇ ಪ್ರಮುಖ ಆದಾಯ ಮೂಲವಾಗಿದೆ. ಜಮೀನಿನಲ್ಲಿ ಬೆಳೆಯುವ ಹುಲ್ಲು ಹಾಗೂ ಜೋಳ ಪಶುಗಳಿಗೆ ಆಹಾರವಾಗಿ ಹಾಲು ಉತ್ಪಾದನೆಗೆ ಸಹಕಾರಿ ಆಗುತ್ತಿದೆ ಎಂದರು.

ಹೈನುಗಾರಿಕೆ ಹಾಗೂ ಕೃಷಿ ಆದಾಯದಿಂದಲೇ ರೈತರು, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಚಿಕಿತ್ಸೆ ಹಾಗೂ ಕುಟುಂಬದ ದಿನನಿತ್ಯದ ಖರ್ಚು ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಜಮೀನನ್ನು ಸ್ವಾಧೀನಪಡಿಸಿಕೊಂಡರೆ ರೈತರು ಬರಿಗೈ ಆಗಿ ಸಂಕಷ್ಟಕ್ಕೆ ಸಿಲುಕಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಹಾಸನದ ಸುತ್ತಮುತ್ತ ಈಗಾಗಲೇ ನೂರಾರು ಖಾಸಗಿ ವಸತಿ ಬಡಾವಣೆ ನಿರ್ಮಾಣವಾಗಿದ್ದು, 12ಸಾವಿರಕ್ಕೂ ಹೆಚ್ಚು ಖಾಲಿ ನಿವೇಶನ ಮಾರಾಟವಾಗದೇ ಉಳಿದಿವೆ. ಇದೇ ವೇಳೆ ಹುಡಾದಿಂದ ನಿರ್ಮಿಸಿರುವ ಎಸ್.ಎಂ. ಕೃಷ್ಣಾನಗರ ವಸತಿ ಬಡಾವಣೆಯಲ್ಲಿ ಶೇ.30 ರಷ್ಟು ಮನೆ ಮಾತ್ರ ನಿರ್ಮಾಣಗೊಂಡಿದ್ದು, ಉಳಿದ ಶೇ.70 ರಷ್ಟು ನಿವೇಶನ ಖಾಲಿಯಾಗಿವೆ. ಪ್ರಸ್ತುತ ನಿರ್ಮಾಣ ಹಂತದಲ್ಲಿರುವ ಕೆಂಚಟ್ಟಹಳ್ಳಿ ವಸತಿ ಬಡಾವಣೆಯಲ್ಲಿ ಸುಮಾರು 14 ಸಾವಿರ ನಿವೇಶನ ಹಂಚಿಕೆ ಹಂತದಲ್ಲಿವೆ. ಇದಲ್ಲದೆ, 20 ವರ್ಷಗಳ ಹಿಂದೆ ಕೆಹೆಚ್‌ಬಿ ನಿರ್ಮಿಸಿದ ಸತ್ಯಮಂಗಲ ಹಾಗೂ ಚನ್ನಪಟ್ಟಣ ವಸತಿ ಬಡಾವಣೆಗಳಲ್ಲಿಯೂ ಅನೇಕ ಖಾಲಿ ನಿವೇಶನ ಉಳಿದಿವೆ.

ಈ ಹಿನ್ನೆಲೆಯಲ್ಲಿ ನಿವೇಶನಗಳ ನಿಜವಾದ ಬೇಡಿಕೆ ಬಗ್ಗೆ ಸಮಗ್ರ ಸಮೀಕ್ಷೆ ನಡೆಸದೆ ರೈತರ ಫಲವತ್ತಾದ ಕೃಷಿ ಜಮೀನನ್ನು ವಸತಿ ಬಡಾವಣೆಗಳಾಗಿ ಪರಿವರ್ತಿಸುವುದು ಸರಿಯಲ್ಲ.

ಇದರಿಂದ ಬಂಡವಾಳಶಾಹಿಗಳಿಗೆ ಮಾತ್ರ ಲಾಭವಾಗುವ ಪರಿಸ್ಥಿತಿ ಉಂಟಾಗಬಹುದು ಎಂದರು.

ಆದ್ದರಿಂದ ಹೂವಿನಹಳ್ಳಿ ಮತ್ತು ಹೂವಿನಹಳ್ಳಿ ಕಾವಲು ಗ್ರಾಮದ ಬಡ ರೈತರ ಜೀವನಾಧಾರವಾಗಿರುವ ಕೃಷಿ ಜಮೀನನ್ನು ವಸತಿ ಬಡಾವಣೆಗಾಗಿ ಸ್ವಾಧೀನಪಡಿಸಿಕೊಳ್ಳುವ

ಯೋಜನೆಯನ್ನು ಸರ್ಕಾರ ಪುನರ್ ಪರಿಶೀಲಿಸಬೇಕು. ರೈತರ ಬದುಕಿಗೆ ಆಧಾರವಾದ ಈ ಜಮೀನು ಉಳಿಸಿಕೊಡಬೇಕು ಎಂದು ಗ್ರಾಮಸ್ಥರು ಸರ್ಕಾರಕ್ಕೆ ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಗ್ರಾಮದ ಸದಾಶಿವ, ಹರೀಶ್, ಹೇಮಂತ್, ನಾಗರಾಜು, ರೇವತಿ, ಕೃಷ್ಣಮೂರ್ತಿ, ರವಿಕುಮಾರ್ ಇದ್ದರು.

## ಅಕ್ರಮ ಮರಳುಗಾರಿಕೆ ಹೆಚ್ಚಳ : ಕ್ರಮ ಕೈಗೊಳ್ಳಲು ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನಲ್ಲಿ ಅಕ್ರಮ ಮರಳುಗಾರಿಕೆ ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇದಕ್ಕೆ ಮೂಗುದಾರ ತೊಡಿಸುವವರು ಯಾರು ಎಂಬ ಪ್ರಶ್ನೆಯನ್ನು ಸಾರ್ವಜನಿಕರು ಕೇಳುತ್ತಿದ್ದಾರೆ.

ಪಟ್ಟಣದ ಸುತ್ತ ಹರಿಯುವ ಹೇಮಾವತಿ ನದಿಯ ಪಾತ್ರದಲ್ಲಿ ನಿರಂತರವಾಗಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ವಿಡಿಯೋ, ಫೋಟೋ ಹಾಗೂ ಪತ್ರಿಕಾ ವರದಿಗಳ ಮೂಲಕ ಹಲವು ಬಾರಿ ತಂದಿದ್ದರೂ ಇದುವರೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ.

ಮಳಲಿ ಲೇಔಟ್ ಸಮೀಪದಲ್ಲಿ ಸಂಗ್ರಹಿಸಲಾಗಿರುವ ಸುಮಾರು ನೂರಕ್ಕೂ ಹೆಚ್ಚು ಲೋಡ್ ಮರಳನ್ನು ಇದುವರೆಗೆ ಅಧಿಕಾರಿಗಳು ವಶಕ್ಕೆ ಪಡೆದಿಲ್ಲ ಎನ್ನಲಾಗಿದೆ.



ಅಕ್ರಮ ಮರಳುಗಾರಿಕೆ ನಡೆಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಿದ್ದರೂ, ಸಂಬಂಧಪಟ್ಟ ಇಲಾಖೆಗಳು ಮರಳನ್ನು ಜಪ್ತಿ ಮಾಡುವುದನ್ನು ಬಿಟ್ಟು ಪ್ರಕರಣ ದಾಖಲಿಸುವುದಲ್ಲಿಯೂ ನಿರ್ಲಕ್ಷ್ಯ ತೋರಿವೆ ಎಂಬ ಆರೋಪ ಕೇಳಿಬರುತ್ತಿದೆ. ಇದನ್ನೇ ಲಾಭವಾಗಿ ಮಾಡಿಕೊಂಡಿರುವ ಅಕ್ರಮ ಮರಳುಗಾರರು ಹಗಲು?ರಾತ್ರಿ ಎನ್ನದೆ ನಿರ್ಬಂಧವಿಲ್ಲದೆ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.

ಸೋಮವಾರ ಮುಂಜಾನೆ ಪಟ್ಟಣದ ಅಜಾದ್ ರಸ್ತೆಯಲ್ಲಿರುವ ಭುವನೇಶ್ವರಿ ವೃತ್ತದ ಸಮೀಪ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದ ಒಂದು ವಾಹನ ಕೆಟ್ಟುಹೋದ ಹಿನ್ನೆಲೆಯಲ್ಲಿ ಅದರಲ್ಲಿದ್ದ ಮರಳನ್ನು ರಸ್ತೆ ಮೇಲೆಯೇ ಸುರಿದು ವಾಹನವನ್ನು ಅಲ್ಲಿಂದ ತೆಗೆದುಕೊಂಡು ಹೋಗಿರುವ ಘಟನೆ ನಡೆದಿದೆ.

ಮರಳು ಸುರಿದಿರುವ ಸ್ಥಳವು ಉಪವಿಭಾಗಾಧಿಕಾರಿ ಕಚೇರಿ, ತಹಸೀಲ್ದಾರ್ ಕಚೇರಿ ಹಾಗೂ ಪೊಲೀಸ್ ಠಾಣೆಗೆ ಸುಮಾರು 200 ಮೀಟರ್ ದೂರದಲ್ಲಿದ್ದರೂ ಇದುವರೆಗೆ ಅಧಿಕಾರಿಗಳು ಅಥವಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಮರಳನ್ನು ಜಪ್ತಿ ಮಾಡಿಲ್ಲ ಎಂಬುದಾಗಿ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಧಿಕಾರಿಗಳು ನೆಪಮಾತ್ರಕ್ಕೆ ಒಂದೆರಡು ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸುತ್ತಾರೆ. ಆದರೆ ವಾಸ್ತವದಲ್ಲಿ ಅಧಿಕಾರಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿಲ್ಲದವರ ವಾಹನಗಳನ್ನು ಮಾತ್ರ ಬೆನ್ನಟ್ಟಿ ಪ್ರಕರಣ ದಾಖಲಿಸಲಾಗುತ್ತದೆ. ಹೊಂದಾಣಿಕೆ ಮಾಡಿಕೊಂಡಿರುವವರ ವಿರುದ್ಧ ಕ್ರಮ ಕೈಗೊಳ್ಳುವುದಿಲ್ಲ ಎಂಬ ಆರೋಪವನ್ನು ಸಾರ್ವಜನಿಕರು ಮಾಡುತ್ತಿದ್ದಾರೆ.


ಅಕ್ರಮ ಮರಳುಗಾರಿಕೆಯಲ್ಲಿ ತೊಡಗಿಕೊಂಡಿರುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಹೇಮಾವತಿ ನದಿ ಪರಿಸರವನ್ನು ಉಳಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಆದರೆ ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಜಾಣ ಕುರುಡುತನ ಪ್ರದರ್ಶನ ಮಾಡುತ್ತಿದ್ದಾರೆ

## ನರಸಿಂಹಸ್ವಾಮಿ ಸ್ವಾತಿ ನಕ್ಷತ್ರ ಉತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಎಂ.ಹೊನ್ನೇನಹಳ್ಳಿ ಗ್ರಾಮದ ಪುರಾಣ ಪ್ರಸಿದ್ಧ ಶ್ರೀ ಕಂಬದ ನರಸಿಂಹಸ್ವಾಮಿ ಸ್ವಾತಿ ನಕ್ಷತ್ರ ಉತ್ಸವವು ದೊಡ್ಡೇರಿ ವಂಶಸ್ಥರು ಮತ್ತು ಗ್ರಾಮಸ್ಥರಿಂದ ವಿಜೃಂಭಣೆಯಿಂದ ನೆರವೇರಿತು.

ಪ್ರತಿ ವರ್ಷದಂತೆ ಈ ವರ್ಷಮೂ ನುಗ್ಗೇಹಳ್ಳಿ ಗ್ರಾಮದ ದೊಡ್ಡೇರಿ ವಂಶಸ್ಥರು ಮತ್ತು ಗ್ರಾಮಸ್ಥರಿಂದ ಸ್ವಾತಿ ನಕ್ಷತ್ರ ಉತ್ಸವದ ಅಂಗವಾಗಿ ಗ್ರಾಮದ ರಾಜಬೀದಿಗಳಲ್ಲಿ ಶ್ರೀ ಕಂಬದ ನರಸಿಂಹ ಸ್ವಾಮಿ ಉತ್ಸವ ನೂರಾರು ಭಕ್ತರ ಸಮ್ಮುಖದಲ್ಲಿ ಸಾಗಿತು.



ಸ್ವಾತಿ ನಕ್ಷತ್ರ ಉತ್ಸವದ ಪ್ರಯುಕ್ತ ದೇಗುಲಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ವಿದ್ಯುತ್ ದೀಪ ಅಲಂಕಾರಗಳು ಜಗಮಗಿಸಿದವು.

ದೇವಾಲಯದಲ್ಲಿ ಬೆಳಗ್ಗೆಯಿಂದಲೇ ಮೂಲ ಮೂರ್ತಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆಗಳು ನೆರವೇರಿದವು ಉತ್ಸವದ ಅಂಗವಾಗಿ ದೊಡ್ಡೇರಿ ವಂಶಸ್ಥರಿಂದ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ದೇವಾಲಯ ಜೀರ್ಣೋದ್ಧಾರದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮೂಲ ವಿಗ್ರಹವನ್ನು ದೇವಾಲಯದ ಪಕ್ಕದಲ್ಲಿ ಪ್ರತಿಷ್ಠಾಪನೆ ಮಾಡುವ ಮೂಲಕ ದಿನನಿತ್ಯ ಪೂಜೆ ನೆರವೇರುತ್ತಿದೆ.

ಎಂ.ಹೊನ್ನೇನಹಳ್ಳಿ, ನುಗ್ಗೇಹಳ್ಳಿ ಗ್ರಾಮದ ದೊಡ್ಡೇರಿ ಬಳಗ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಉತ್ಸವದಲ್ಲಿ ಪಾಲ್ಗೊಂಡಿದ್ದರು. ಮಹಾಮಂಗಳಾರತಿ ನಂತರ ಪ್ರಸಾದ ವಿನಿಯೋಗ ನಡೆಯಿತು.

## ನಾಯಿಗೆ ಆಹಾರ: ಸ್ಪಷ್ಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಕುವೆಂಪು ನಗರ ಬಡಾವಣೆಯಲ್ಲಿ ಮಾ.1 ರ ರಾತ್ರಿ ಯಾರಿಗೂ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾವು, ನಮ್ಮ ಸ್ನೇಹಿತರಾದ ಡಾ.ಶ್ರೀನಿವಾಸ್ ಮೂರ್ತಿ ಮೊದಲಾದವರು ನಾಯಿಗಳಿಗೆ ಆಹಾರ ಹಾಕಿಲ್ಲ ಎಂದು ದಲಿತ ಪರ ಹೋರಾಟಗಾರರ ಒಕ್ಕೂಟದ ದಿನೇಶ್ ಎನ್.ಟಿ.ಸ್ಪಷ್ಟಪಡಿಸಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪುನಗರದಲ್ಲಿ ಮಾತ್ರವೇ ನಾಯಿಗಳಿಗೆ ಅನ್ನ ಹಾಕುವುದಿಲ್ಲ. ಆದರೆ ಪ್ರೊ.ಕೃಷ್ಣಪ್ಪ ಹಾಗೂ ಅವರ ಪುತ್ರ ವೈದ್ಯರನ್ನು ತಡೆದು ಬೈಯ್ದು, ಇಲ್ಲಿ





ಯಾವ ನಾಯಿಗೂ ಊಟ ಹಾಕಬೇಡಿ ಎಂದು ಧಮ್ಕಿ ಹಾಕಿದ್ದಾರೆ. ಆಗ ವೈದ್ಯರು ನನಗೆ ಹೇಳಿದರು. ಅದಾದ ಬಳಿಕಮೂ ವೈದ್ಯರು ತಮ್ಮ ಕರ್ತವ್ಯ ಮುಂದುವರಿಸಿದಾಗ ನೀನು ಯಾವ ಸೀಮೆ ಡಾಕ್ಟರ್ ಎಂದೆಲ್ಲ ನಿಂದಿಸಿದ್ದಾರೆ.

## ಯುಪಿಎಸ್ಸಿ ಸಾಧಕ ಮನೋಜ್‌ಗೆ ಪತ್ರಕರ್ತರ ಅಭಿನಂದನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಗುರ್ಜನಳ್ಳಿ ಗ್ರಾಮದ ಮನೋಜ್ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಐಪಿಎಸ್‌ಗೆ ಆಯ್ಕೆಯಾಗಿರುವ ಹಿನ್ನೆಲೆ ಸಕಲೇಶಪುರ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಜೈ ಭೀಮ್ ಮಂಜುನಾಥ್ ಮಾತನಾಡಿ, ಗ್ರಾಮೀಣ ಪ್ರದೇಶದಿಂದ ಬಂದ ಮನೋಜ್ ಅವರ ಸಾಧನೆ ಯುವಜನತೆಗೆ ಪ್ರೇರಣೆಯಾಗಿದೆ ಎಂದು ಹೇಳಿದರು. ಶ್ರಮ, ಸಂಕಲ್ಪ ಹಾಗೂ ನಿರಂತರ ಪ್ರಯತ್ನದ ಮೂಲಕ ಉನ್ನತ ಹುದ್ದೆಗಳನ್ನು



ಸಾಧಿಸಬಹುದು ಎಂಬುದಕ್ಕೆ ಮನೋಜ್ ಅವರು ಉತ್ತಮ ಉದಾಹರಣೆಯಾಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಸುದೀರ್ ಭಟ್, ಮಾಜಿ ಅಧ್ಯಕ್ಷ ಮಲ್ನಾಡ್ ಮೆಹಬೂಬ್, ಸಾಸು ವಿಶ್ವನಾಥ್ ಹಾಗೂ ಮಲ್ನಾಡ್ ಪ್ರವೀಣ್ ಉಪಸ್ಥಿತರಿದ್ದು ಮನೋಜ್ ಅವರಿಗೆ ಅಭಿನಂದನೆ ಸಲ್ಲಿಸಿ ಶುಭಾಶಯ ಕೋರಿದರು.

# ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರ ಪಾತ್ರ ತುಂಬಾ ಮುಖ್ಯ: ಜಿಲ್ಲಾಧಿಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಮಹಿಳೆಯರು ಕೂಡ ಪುರುಷರಂತೆ ಪ್ರತಿಯೊಂದು ಕ್ಷೇತ್ರದಲ್ಲೂ ಅವರ ಸಮನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಆದ್ದರಿಂದ ಸಮಾಜದಲ್ಲಿ ಮಹಿಳೆಯರ ಪಾತ್ರ ತುಂಬಾ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್ ಲತಾ ಕುಮಾರಿ ತಿಳಿಸಿದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಪೊಲೀಸ್ ಇಲಾಖೆ,ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಹಾಗೂ ಸಾಕ್ಷಾರತ ಇಲಾಖೆ ಸಮಾಜ ಕಲ್ಯಾಣ ಇಲಾಖೆ, ಕಾರ್ಮಿಕ ಇಲಾಖೆ, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರ ಸಂಯುಕ್ತಾಶ್ರಯದಲ್ಲಿ, ಬೇಟಿ ಬಚಮೋ, ಬೇಟಿ ಪಡಮೋ ಯೋಜನೆಯಡಿಯಲ್ಲಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚಾರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳಾ ದಿನಚಾರಣೆಯನ್ನು ಮಹಿಳೆಯರು ಅ?ೆ್ಟೀ ಆಚರಣೆ ಮಾಡಬೇಕು ಅಂತ ಇಲ್ಲ, ಪುರು?ರು ಕೂಡ ಮಹಿಳಾ ದಿನಚಾರಣೆಯನ್ನು ಆಚರಣೆ ಮಾಡುವುದರ ಮೂಲಕ ಇಬ್ಬರು ಸಮಾನ ಎಂಬ ಸಂದೇಶ ಸಾರಬೇಕು.

ಪ್ರಸ್ತುತ ಸಮಾಜ ಪುರುಷ ಪ್ರಧಾನ ಸಮಾಜ, 1000 ವರ್ಷಗಳ ಹಿಂದೆ ಕೂಡ ಈ ಸಮಾಜ ಹೀಗೆ ಇದೆ ಯಾವುದೇ ರೀತಿಯಲ್ಲೂ ಬದಲಾವಣೆ ಆಗಿಲ್ಲ ಬದಲಾವಣೆ ಆಗಬೇಕು ಎಂದು ಹೇಳಿದರು.

ಸಂವಿಧಾನದಲ್ಲಿ ಜಾತಿ , ಧರ್ಮ, ಲಿಂಗ, ಪ್ರಾದೇಶಿಕ,



ಭಾಷೆಗಳಲ್ಲಿ ಸಮಾನತೆಯನ್ನು ಕಾಣುತ್ತೇವೆ, ಸಮಾನತೆಯ ಸ್ವಾತಂತ್ರ ಸಮಾಜದಲ್ಲಿ ಎದ್ದು ಕಾಣಬೇಕು, ಆದರೆ ಅಂತಹ ಸಮಾನತೆ ಎಲ್ಲೋ ಒಂದು ಕಡೆ ಮರೆಯಾಗುತ್ತಿದೆ ಎಂದರು.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ದ್ವಿತೀಯ ದರ್ಜೆ ಪ್ರಜೆ, ಸಂವಿಧಾನ ಮಹಿಳೆಯರಿಗೆ ಬಲವನ್ನ ನೀಡಿದೆ ಆದರೆ ಸಮಾಜ ಆ ರೀತಿಯಲ್ಲಿ ನೋಡುತಿಲ್ಲ,

ಸಂವಿಧಾನದ ತತ್ವಗಳನ್ನು ಎಲ್ಲಿವರೆಗು ಪಾಲಿಸುವುದಿಲ್ಲಮೋ ಅಲ್ಲಿವರೆಗೂ ಸಮಾಜ ಮಹಿಳೆಯರಿಗೆ ಪರಿವರ್ತನೆ ಸಾಧ್ಯವಿಲ್ಲ ಎಂದು ತಿಳಿಸಿದರು.

ಅಂಗವಿಕಲ ಮಹಿಳೆಯರಿಗೆ, ಹಿಂದುಳಿದ ವರ್ಗ ಮಹಿಳೆಯರಿಗೆ, ಹಿರಿಯ ನಾಗರಿಕ ಮಹಿಳೆಯರಿಗೆ ಇನ್ನೂ ಕೂಡ ಸಮಾಜದಲ್ಲಿ ಭದ್ರತೆ ಇಲ್ಲ, ಇಂತಹ ಎಲ್ಲ ಮಹಿಳೆಯರಿಗೂ ಕೂಡ ಭದ್ರತೆ ಸಿಗಬೇಕೆಂದರೆ ಸಂವಿಧಾನದ ತತ್ವಗಳನ್ನು ಪಾಲಿಸುತ್ತಾ ಅದರ ಆಯಾಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಒಂದು ಹೆಣ್ಣು ಮಗು ಸಮಾಜದಲ್ಲಿ ರಾಜಕೀಯಕ್ಕೆ ಬಂದರೆ ನೂರಾರು ಜನರು ಪ್ರಶ್ನೆ ಮಾಡುತ್ತಾರೆ, ಅದೇ ರೀತಿ ಗಂಡು ಮಗು ಬಂದರೆ ಯಾರು ಕೂಡ ಪ್ರಶ್ನೆ ಮಾಡುವುದಿಲ್ಲ, ಇಂತಹ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೈತಿಕತೆ ಸಮಾನವಾಗಿ ದೊರೆಯುತ್ತಿಲ್ಲವೆಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಬಿ.ಕೆ ಅವರು ಮಾತನಾಡಿ, ಮಹಿಳೆಯರು ನಾಲ್ಕು ಗೋಡೆಗಳ ಒಳಗೆ ಮಾತ್ರ ಸೀಮಿತವಲ್ಲ, ಸ್ವಾತಂತ್ರವಾಗಿ ಎಲ್ಲಾ ಕ್ಷೇತ್ರದಲ್ಲೂ ಕೂಡ ಕಾರ್ಯನಿರ್ವಹಿಸಬಹುದು ಎಂದರು.

ಆಡು ಮುಟ್ಟದ ಸೊಪ್ಪಿಲ್ಲ ಎಂದು ಹೇಳುತ್ತಾರೋ ಹಾಗೆಯೇ ಹೆಣ್ಣು ಅಲಂಕರಿಸದ ಅಧಿಕಾರವಿಲ್ಲ ಪ್ರತಿಯೊಂದು ಕ್ಷೇತ್ರದಲ್ಲೂ ಕೂಡ ಮಹಿಳೆಯರನ್ನು ಕಾಣಬಹುದು ಎಂದು ಹೇಳಿದರು.

ಪ್ರತಿಯೊಂದು ಹೆಣ್ಣು ಮಕ್ಕಳು ಕೂಡ ಆರ್ಥಿಕವಾಗಿ ಸಬಲೀಕರಣವಾಗಬೇಕೆಂದು ಸರ್ಕಾರ ಅನೇಕ ರೀತಿಯ ಯೋಜನೆಗಳನ್ನು ಜಾರಿಗೆ ತಂದಿತು, ಆದ್ದರಿಂದ ಸಮಾಜದಲ್ಲಿ ಪ್ರತಿಯೊಂದು ಹೆಣ್ಣುಮಗು ಆರ್ಥಿಕವಾಗಿ ಸಬಲೀಕರಣವಾಗಿರುವುದನ್ನು ಕಾಣಬಹುದು ಎಂದು ತಿಳಿಸಿದರು.

ಸಾಹಿತಿ ಶೈಲಜಾ ಅವರು ಮಾತನಾಡಿ ಹೆಣ್ಣು ಮಕ್ಕಳಿಗೆ ಸಮಾನವಾಗಿ ನಿಲ್ಲುವವರು ಯಾರು ಕೂಡ ಇಲ್ಲ, ಸಮಾಜದಲ್ಲಿ ಹೆಣ್ಣು ಮಗುವನ್ನು ಶಕ್ತಿಯ ಸ್ವರೂಪ ಎಂದು ಕೂಡ ಹೇಳಬಹುದು ಎಂದರು.

ಮಹಿಳೆಯರಿಗೆ ಆರ್ಥಿಕವಾದ ಸ್ವಾತಂತ್ರ, ಧಾರ್ಮಿಕವಾದ ಸ್ವಾತಂತ್ರ ಹೀಗೆ ಪ್ರತಿಯೊಂದು ಸ್ವಾತಂತ್ರಮಾ ಕೂಡ ದೊರೆಯುತ್ತಿದೆ ಆದರಿಂದ ಹೆಣ್ಣು ಸಮಾಜದಲ್ಲಿ ಬದುಕಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.

ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಹಲವು ರೀತಿಯ ಅನಿಷ್ಟ ಪದ್ಧತಿಗಳಿಗೆ ಒಳಗಾಗುತ್ತಿದ್ದರು, ಆದರೂ ಕೂಡ ಅಂತಹ ಪದ್ಧತಿಗಳನ್ನೆಲ್ಲ ದಾಟಿ ಸಮಾಜದಲ್ಲಿ ಪುರು?ರ?ೆ್ಟೀ ಸಮನರಾಗಿದ್ದೇವೆ ಎಂದು ಸಾಧನೆ ಮೂಲಕ ತೋರಿಸಿದ್ದಾರೆ ಎಂಬುದು ಹೆಮ್ಮೆ ತರುವಂತಹ ವಿ?ಯ ಎಂದು ಹೇಳಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅನುಪಮಾ, ಜಿಲ್ಲಾ ಕಾರ್ಮಿಕ ಅಧಿಕಾರಿ ಯಮುನ.ಕೆ.ಎನ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಮಹಿಳೆಯರಿಗೆ ಆರೋಗ್ಯ ತಪಾಸಣಾ ಶಿಬಿರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಗರದ ಮಹಾರಾಜ ಪಾರ್ಕ್‌ನಲ್ಲಿ ರಾಷ್ಟ್ರ ಸೇವಿಕಾ ಸಮಿತಿ, ರಾಜೀವ್ ಆಯುರ್ವೇದ ಮಹಾವಿದ್ಯಾಲಯ ಇವರ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ನಡೆಸಲಾಯಿತು.

ರಾಷ್ಟ್ರ ಸೇವಿಕಾ ಸಮಿತಿಯ ಜಿಲ್ಲಾ ಮುಖಂಡರು, ಮಮತಾ, ಭಾಗ್ಯ, ಸುವರ್ಣ ಅಕ್ಕ, ರಜಿನಿ, ಹೇಮ ಹಾಗೂ ಕಲಾ ಅವರ ನೇತೃತ್ವದಲ್ಲಿ, ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಯಿತು. ಶಿಬಿರದಲ್ಲಿ ಮಹಿಳೆಯರು ಹಾಗೂ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಗಿದ್ದು, ವೈದ್ಯರು ತಪಾಸಣೆ, ಆರೋಗ್ಯದ ಬಗ್ಗೆ ಅಗತ್ಯ ಸಲಹೆ ಹಾಗೂ ಮಾರ್ಗದರ್ಶನ ನೀಡಿದರು. ವಿಶೇಷವಾಗಿ ಮಹಿಳೆಯರ ಆರೋಗ್ಯ ಕಾಳಜಿ, ಪೌಷ್ಟಿಕ ಆಹಾರ, ಜೀವನ ಶೈಲಿ ಹಾಗೂ ವಿವಿಧ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆ ಮುಖಂಡರು ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ತಿಳಿಸಿದರು. ಇಂತಹ ಶಿಬಿರಗಳು ಗ್ರಾಮೀಣ ಮತ್ತು ನಗರ ಪ್ರದೇಶದ ಜನರಿಗೆ ಬಹಳ ಉಪಯುಕ್ತವಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಸದಸ್ಯರು ಹಾಗೂ ಸ್ಥಳೀಯರು ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.

# ರಾಜಕೀಯ ಅರಿವು ಮೂಡಿಸಿಕೊಳ್ಳಲು ಕರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯುವಜನತೆ ರಾಜಕೀಯ ಅರಿವು ಪಡೆದುಕೊಳ್ಳುವುದರಿಂದ ದೇಶ ಉತ್ತಮ ನಾಯಕತ್ವ ಮತ್ತು ಅಭಿವೃದ್ಧಿ ಕಾಣಬಹುದು ಎಂದು ಶ್ರೀ ಧರ್ಮಸ್ಥಳ ಆಯುರ್ವೇದ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಡಾ. ಶೈಲಜಾ ಯು ಹೇಳಿದರು.

ನಗರದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ವಿಕಸಿತ್ ಭಾರತ್ ಯುವ ಸಂಸತ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವಜನತೆ ದೇಶದ ಸಂಪತ್ತು, ಯುವ ಜನತೆಯನ್ನು ದೇಶದ ಸಾಮಾಜಿಕ, ರಾಜಕೀಯ ಮತ್ತು ಅರ್ಥಿಕ ಅಭಿವೃದ್ಧಿಗಳಿಗೆ ಬಳಸಿಕೊಂಡಲ್ಲಿ ದೇಶ ಸಧೃಡವಾಗಿ ಮತ್ತು ಅಭಿವೃದ್ಧಿ ಪಥದಲ್ಲಿ ಸಾಗಲು ಸಾಧ್ಯ ಎಂದು ಹೇಳಿದರು.



ಸಂಸ್ಥೆಯ ನಿರ್ದೇಶಕರಾದ ಡಾ. ರಾಜಣ್ಣ ಬಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಯುವಕರಿಗೆ ಸಂಸತ್ತಿನ ಕಾರ್ಯಪದ್ಧತಿ, ಚರ್ಚಾ ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವದ ಮಹತ್ವವನ್ನು ಅರಿಯುವ ಒಂದು ಉತ್ತಮ ವೇದಿಕೆಯಾಗಿದೆ. ಯುವಕರು ತಮ್ಮ ಆಲೋಚನೆಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಸಂಬಂಧಿಸಿದ ತಮ್ಮ ದೃಷ್ಟಿಕೋನ ಹಂಚಿಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದರು.

ಈ ಸ್ಪರ್ಧೆಗೆ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ವಿಶಿಷ್ಟ ಜ್ಞಾನ ಹೊಂದಿರುವ ವಿಜಯ ಶಾಲೆಯ ಅಕಾಡೆಮಿಕ್ ಹೆಡ್ ಡಾ. ಶ್ರೀಲಕ್ಷ್ಮೀ, ಸರಕಾರಿ ಕಲಾ ಕಾಲೇಜು (ಸ್ನಾತಕೋತ್ತರ ವಿಭಾಗ)ದ ಮುಖ್ಯಸ್ಥರಾದ ಡಾ. ಪಾರ್ಥೇಶ್ ಕೆ.ವಿ., ಸಂಜೀವಿನಿ ಸಹಕಾರಿ ಅಸ್ಪತ್ರೆಯ ನಿರ್ದೇಶಕರಾದ ಡಾ. ಕಾವ್ಯಶ್ರೀ. ಜಿ, ಕರ್ನಾಟಕ ಗ್ಲೋಬಲ್ ಸೋಷಿಯಲ್ ವೆಲ್ ಪೇರ್ ಫೌಂಡೇಷನ್ ರಾಜ್ಯಾಧ್ಯಕ್ಷ ಡಾ. ಇಮ್ರಾನ್ ಅಹಮ್ಮದ್ ಬೇಗ್, ಪ್ರೈಡ್ ಪಿಯು ಕಾಲೇಜು ಆಡಳಿತಾಧಿಕಾರಿ ಸುರೇಶ್ ಗುರೂಜಿ ಇವರು ತೀರ್ಪುಗಾರರಾಗಿ ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ಹಿಮ್ಸ್ ವೈದ್ಯಕೀಯ ಅಧೀಕ್ಷಕರಾದ ಡಾ. ರಾಘವೇಂದ್ರ ಪ್ರಸಾದ್ ಕೆ.ಯು, ಹಿಮ್ಸ್ ಮೈ ಭಾರತ್ ನೋಡೆಲ್ ಅಧಿಕಾರಿ ಡಾ. ಪುರುಷೋತ್ತಮ್ ಆರ್., ಹಿಮ್ಸ್ ಅಂಗರಚನಾಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಡಾ. ಪ್ರಕಾಶ್ ಬಿ.ಎಸ್., ಮೈ ಭಾರತ್ ಕೇಂದ್ರದ ಸಂಯೋಜಕರಾದ ಹರೀಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಹಿಮ್ಸ್ ಕಾರ್ಯಕ್ರಮ ಅಧಿಕಾರಿ ನಿಚಿತಾ ಕುಮಾರಿ ಪ್ರಾಸ್ತಾವಿಕ ನುಡಿ ಆಡಿದರು.

ಈ ಕಾರ್ಯಕ್ರಮವು ಯುವಜನರಲ್ಲಿ ಪ್ರಜಾಪ್ರಭುತ್ವ ಮೌಲ್ಯ ಅರಿವು ಮೂಡಿಸುವುದರೊಂದಿಗೆ, ದೇಶದ ಅಭಿವೃದ್ಧಿ ಮತ್ತು ಸಾಂವಿಧಾನಿಕ ಬದ್ಧತೆಯ ಬಗ್ಗೆ ಜಾಗೃತಿ ಮೂಡಿಸುವ ಮಹತ್ವದ ವೇದಿಕೆಯಾಗಿದೆ.

ಈ ಮಹತ್ವದ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ ಯುವ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಯುವತಿ ಗೃಹಬಂಧನದಲ್ಲಿಟ್ಟು ಚಿತ್ರಹಿಂಸೆ ಆರೋಪ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಕಟ್ಟಾಯ ಹೋಬಳಿ ಬಾಚಿಹಳ್ಳಿಯಲ್ಲಿ ಮಲತಾಯಿ ಹಾಗೂ ಆಕೆ ಮಗ ಕೊಡಬಾರದ ಚಿತ್ರಹಿಂಸೆ ನೀಡಿ ಮಾನಸಿಕ ಖಿನ್ನತೆಗೆ ಒಳಗಾಗುವಂತೆ ಮಾಡಿದ್ದಾರೆ ಎಂದು ಟಿ.ಶಾರದಾ ದೂರಿದರು.

ಇಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಓದಿರುವ ಜ್ಯೋತಿ ಎಂಬ ಯುವತಿ ವಸಂತಕುಮಾರ ಎಂಬುವರ ಮೊದಲ ಪತ್ನಿಯ ಮಗಳಾಗಿದ್ದು, ಹುಟ್ಟಿದಾಗಲೇ ಅಮ್ಮನನ್ನು ಕಳೆದುಕೊಂಡಿದ್ದಾಳೆ. ಆರಂಭದಿಂದಲೂ ಚಿಕ್ಕಮ್ಮ(ಮಲತಾಯಿ) ಪದ್ಮ ಎಂಬಾಕೆ ಕೊಡಬಾರದ ಕಾಟ ಕೊಟ್ಟಿದ್ದಾಳೆ. ಯುವತಿಗೆ ಸರಿಯಾಗಿ ಊಟ-ತಿಂಡಿ ಕೊಡದೆ, ಯಾವುದೇ ಸೌಕರ್ಯ ನೀಡದೆ ರೂಮೊಂದರ ಕತ್ತಲೆ ಕೋಣೆಯಲ್ಲಿ ಕೂಡಿಹಾಕಿ ಮಾನಸಿಕ ಹಿಂಸೆ ನೀಡಿದ್ದಾರೆ ಎಂದು ಆರೋಪಿಸಿದರು. ಇದರಿಂದ ಜ್ಯೋತಿ ಮಾನಸಿಕ ಖಿನ್ನತೆ ಒಳಗಾಗಿದ್ದಾಳೆ.



ಸರಿಯಾಗಿ ಚಿಕಿತ್ಸೆಯನ್ನೂ ಕೊಡಿಸಿಲ್ಲ. ತಂದೆ ವಸಂತ್‌ಕುಮಾರ್ ಹೆಸರಿನಲ್ಲಿದ್ದ ಆಸ್ತಿಯನ್ನು ಪದ್ಮ ಹಾಗೂ ಆಕೆಯ ಮಗ ಮಂಜೇಶ್ ಎಂಬುವರು ತಮ್ಮ ಹೆಸರಿಗೆ ಮಾಡಿಸಿಕೊಂಡು ಮೋಸ ಮಾಡಿದ್ದಾರೆ ಎಂದರು. ಯುವತಿಗೆ ತಿಳಿಯದ ರೀತಿ ಬೇರೆ ಬೇರೆ ಮಾತ್ರೆಗಳನ್ನು ನೀಡಿ, ಆಕೆಗೆ ಜೀವಂತ ಸಮಾಧಿ ಕಟ್ಟುವ ಹುನ್ನಾರ ನಡೆದಿದೆ. ಜ್ಯೋತಿಯನ್ನು ರೂಮಿನಲ್ಲಿ ಕೂಡಿ ಹಾಕಿದ್ದರಿಂದ ಈಕೆ ಅನಾರೋಗ್ಯ ಭೀತಿ ಎದುರಾಗಿದೆ. ಯುವತಿಯನ್ನು ಗೃಹ ಬಂಧನದಲ್ಲಿ ಇಟ್ಟಿರುವ ಬಗ್ಗೆ ಈ ಸಂಬಂಧ ಗೊರೂರು ಪೊಲೀಸ್ ಠಾಣೆಗೆದೂರು ನೀಡಿದರೂ ಯಾವುದೆ ಕ್ರಮ ಕೈಗೊಂಡಿಲ್ಲ. ಆರಂಭದಲ್ಲೇ ಪೊಲೀಸರು ಕ್ರಮ ಕೈಗೊಂಡಿದ್ದರೆ ಜ್ಯೋತಿಗೆ ಇಂಥ ಸ್ಥಿತಿ ಬರುತ್ತಿರಲಿಲ್ಲ ಎಂದು ಭಾವುಕರಾದರು.

ಹುಡುಗಿ ಸ್ನಾನ ಮಾಡಿ ಹಲವು ದಿನಗಳೇ ಕಳೆದಿವೆ. ಹೀಗಾಗಿ ಚರ್ಮದ ಬಣ್ಣವೇ ಬದಲಾಗಿದೆ. ಮೈಯೆಲ್ಲಾ ಕೊಳಲಾಗಿ, ವಿರೂಪವಾಗಿದೆ.ಫೆ.7 ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಅಕ್ಕಪಡೆ ತಂಡದಿಂದ ಜ್ಯೋತಿಯನ್ನು ಗೃಹಬಂಧನದಿಂದ ಬಿಡುಗಡೆಗೊಳಿಸಿ ಹಿಮ್ಸ್ ಆಸ್ಪತ್ರೆಗೆ ಕರೆತಂದು ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಜ್ಯೋತಿಗೆ ಸ್ನಾನ ಮಾಡಿಸುವಾಗ ಆಕೆಯ ಎದೆಯ ಭಾಗಕ್ಕೆ ಕಚ್ಚಿರುವ ಗುರುತು ಕಂಡು ಬಂದಿವೆ. ಮೊದಲೇ ನೊಂದಿರುವ ಯುವತಿಗೆ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಶಂಕೆ ಇದೆ ಎಂದು ಅನುಮಾನ ವ್ಯಕ್ತಪಡಿಸಿದರು. ಆದರೂ ಆಕೆಯನ್ನು ಸೂಕ್ತ ಪರೀಕ್ಷೆಗೆ ಒಳ ಪಡಿಸಲು ಪೊಲೀಸರು ವಿಳಂಬ ಮಾಡುತ್ತಿದ್ದಾರೆ. ಫೆ.17 ರಂದು ಸ್ವತಃ ಎಸ್ಪಿ ಅವರಿಗೇ ಜ್ಯೋತಿಯ ಫೋಟೋ ತೋರಿಸಿದ ನಂತರ ತಕ್ಷಣ ಎಫ್‌ಐಆರ್ ಮಾಡಲು ಸೂಚಿಸಿದ ನಂತರ ಫೆ.18 ರಂದು ಎಫ್‌ಐಆರ್ ದಾಖಲಾಗಿದೆ ಎಂದರು. ಆದರೂ ಹುಡುಗಿಗೆ ಕೊಡಬಾರದ ಕಿರುಕುಳ, ತೊಂದರೆ, ಚಿತ್ರ ಹಿಂಸೆ ನೀಡಿರುವ ಆರೋಪಿಗಳನ್ನು ಈವರೆಗೂ ಬಂಧಿಸಿಲ್ಲ.

ಈ ಬೆಳವಣಿಗೆ ನೋಡಿದರೆ ಪ್ರಕರಣ ಮುಚ್ಚಿಹಾಕುವ ಹುನ್ನಾರ ನಡೆದಿರುವ ಅನುಮಾನ ಮೂಡುತ್ತಿದೆ ಎಂದು ದೂರಿದರು.

ಯುವತಿ ಫೋಟೋ ನೋಡಿದ ಅನೇಕ ವೈದ್ಯರು ಲೈಂಗಿಕ ದೌರ್ಜನ್ಯ ನಡೆದಿರುವ ಬಗ್ಗೆ ಅನುಮಾನ ಹೊರ ಹಾಕಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು.ಇನ್ನಾದರೂ ಅಧಿಕಾರಿಗಳು, ಸಚಿವರು, ಸಂಸದರು, ಮಹಿಳಾ ಆಯೋಗದ ಅಧ್ಯಕ್ಷರು ಈ ಬಗ್ಗೆ ಪರಿಶೀಲಿಸಿ ಅನಾಥ ಜ್ಯೋತಿಗೆ ಆಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸಬೇಕು. ಈ ಸ್ಥಿತಿಗೆ ಕಾರಣವಾಗಿರುವ ಪದ್ಮ ಮತ್ತು ಮಂಜೇಶ್‌ನನ್ನು ಬಂಧಿಸಬೇಕು ಎಂದು ಶಾರದಾ ಒತ್ತಾಯಿಸಿದರು.

# ಬಾಲ್ಯದಿಂದಲೇ ಮಕ್ಕಳಲ್ಲಿ ಭಾರತೀಯ ಸಂಸ್ಕೃತಿ, ಸಂಸ್ಕಾರ ಮನೆ ಮಾಡಲಿ : ನಾಗರತ್ನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ಭಾರತೀಯ ಸಂಸ್ಕೃತಿ, ಸಂಸ್ಕಾರ ಮಕ್ಕಳಲ್ಲಿ ಬಾಲ್ಯದಿಂದಲೇ ಮನೆ ಮಾಡಲಿ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪ್ರೀತಂ ಗೌಡ ಅವರ ತಾಯಿ ನಾಗರತ್ನ ಜವರೇಗೌಡ ಆಶಿಸಿದರು.

ನಗರದ ಬೂವನಹಳ್ಳಿ ಕೂಡು ಬಳಿ ಇರುವ ಶ್ರೀ ರಂಗನಾಥ ಸ್ವಾಮಿ ಹಿರಿಯ ಪ್ರಾಥಮಿಕ. ಶಾಲೆಯ ಮಾತೃಭೋಜನ ಕಾರ್ಯಕ್ರಮವದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಿ ಅವರು ಮಾತಾಡಿ, ಮಾತೃ ಭೋಜನ ಅಮ್ಮ ಮತ್ತು ಮಗುವಿನ ನಡುವೆ ಬಾಂಧವ್ಯ ಹೆಚ್ಚಿಸುವಂತಹ ಹಾಗೂ ಮಗುವಿನ ಜೀವನದಲ್ಲಿ ತಂದೆ ತಾಯಿಯ



ಪಾತ್ರ ಎಷ್ಟು ಗಮನಾರ್ಹವಾಗಿರುತ್ತದೆಂದು ಈ ಕಾರ್ಯಕ್ರಮ ತೋರಿಸುತ್ತಿದೆ ಎಂದರು.

ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿ ಅನ್ಯ ಸಂಸ್ಕೃತಿಯನ್ನುಅನುಸರಿಸುತ್ತಿರುವ ಈ ಕಾಲದಲ್ಲಿ ನಮ್ಮ ಹಿಂದೂ ಧರ್ಮದ ಸಂಸ್ಕೃತಿಯನ್ನು ಎತ್ತಿ ಹಿಡಿಯುವಂತಹ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರು ಹೆಚ್ಚು ಪ್ರಮುಖ ಎಂಬುದನ್ನು ಈ ಕಾರ್ಯಕ್ರಮದ ಮೂಲಕ ತಿಳಿಸುವ ಕಾರ್ಯವನ್ನು ಈ ಶಾಲೆಯ ಎಲ್ಲಾ ಶಿಕ್ಷಕರು ಪಾಠದೊಡನೆ ಈ ಕಾರ್ಯಕ್ರಮದ ಮೂಲಕ ಮನಮುಟ್ಟುವಂತೆ ತಿಳಿಯಪಡಿಸುವ ಪ್ರಯತ್ನ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ರಂಗಭೂಮಿ ಕಲಾವಿದೆ ಪೂಜಾ ರಘುನಂದನ್ ಮತ್ತು ರಾಷ್ಟ್ರಸೇವಾ ಸಮಿತಿ. ಜಿಲ್ಲಾ ಸಹಕಾರ್ಯವಾಹಿಕರಾದ ಮಮತ ಮಂಜುನಾಥ್, ಸಂಸ್ಥೆಯ ಕಾರ್ಯದರ್ಶಿ ಬಿ.ವಿ. ಶ್ರೀನಿವಾಸ್, ಶಾಲಾ ಸಮಿತಿ ಸದಸ್ಯರು, ಮುಖ್ಯಶಿಕ್ಷಕರು ಹಾಗೂ ಶಿಕ್ಷಕವೃಂದ ಪೋಷಕರು ಮತ್ತು ವಿದ್ಯಾರ್ಥಿಗಳು ಈ ಕಾರ್ಯಕ್ರಮಲ್ಲಿ ಇದ್ದರು.

# ಮಾ.13 ರಂದು ನಾಟಕ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಾಲೂಕಿನ ಸತ್ತಿರಗಹಳ್ಳಿ ಕೊಪ್ಪಲು, ಸತ್ತಿಗರಹಳ್ಳಿ, ಕಾರ್ಲೆ, ಜೋಡಿ ಮಲ್ಲಪ್ಪನಹಳ್ಳಿ ಗ್ರಾಮಸ್ಥರ ಸಮ್ಮುಖದಲ್ಲಿ ಮಾರಮ್ಮ ಅವರ ರಥೋತ್ಸವ ಮತ್ತು ಜಾತ್ರಾ ಮಹೋತ್ಸವ ಮಾ.13 ರಂದು ರಾತ್ರಿ 8.30ಕ್ಕೆ ನಡೆಯಲಿದೆ ಎಂದು ಗ್ರಾಮದ ದೇಗುಂದೇಗೌಡ, ಕೆ.ಹೆಚ್.ರಾಮಚಂದ್ರ, ಪುಟ್ಟರಾಜು ತಿಳಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಜಾತ್ರಾಮಹೋತ್ಸವದ ಅಂಗವಾಗಿ ಶ್ರೀ ಮಾರಮ್ಮ ಅವರ ಕೃಪಾಪೋಷಿತ ನಾಟಕ ಮಂಡಳಿ, ಶ್ರೀ ಆದಿಚುಂಚನಗಿರಿ ಕಾಲ ಭೈರವೇಶ್ವರ ಯುವಕರ ಸಂಘ ಸತ್ತಿಗರಹಳ್ಳಿ ಕೊಪ್ಪಲು ಇವರ ಆಶ್ರಯದಲ್ಲಿ ಮಂಡ್ಯದ ಶ್ರೀ ವಿನಾಯಕ ಡ್ರಾಮ



ಸೀನರಿ ಇವರ ಎಲ್‌ಇಡಿ ಭವ್ಯ ರಂಗ ವೇದಿಕೆಯಲ್ಲಿ ತ್ರಿಜನ್ಮ ಮೋಕ್ಷ ಅಥವಾ ಜಯ ವಿಷಯದ ಶಾಪ ವಿಮೋಚನೆ ನಾಟಕ ಪ್ರದರ್ಶನ ಇದೆ ಎಂದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-10

ಪೂ 241 ರಲ್ಲಿ ಏಗೇಟ್ಸ್ ದ್ವೀಪಗಳ ಕದನ: ರೋಮನ್ನರು ಕಾರ್ತೇಜ್ ನೌಕಾಪಡೆಯನ್ನು ಮುಳುಗಿಸಿ, ಮೊದಲ ಪ್ಯೂನಿಕ್ ಯುದ್ಧವನ್ನು ಕೊನೆಗೊಳಿಸಿದರು.

1783 ರಲ್ಲಿ , ಕ್ಯಾಪ್ಟನ್ ಬ್ಯಾರಿ ನೇತೃತ್ವದಲ್ಲಿ ಯುಎಸ್‌ಎಸ್ ಅಲ್ಲೈಯನ್ಸ್, ಕೇಪ್ ಕೆನವೆರಲ್ ಬಳಿ ಅಮೇರಿಕನ್ ಕ್ರಾಂತಿಕಾರಿ ಯುದ್ಧದ ಅಂತಿಮ ನೌಕಾ ಯುದ್ಧವನ್ನು ಹೋರಾಡಿ ಗೆದ್ದಿತು.

1861 ರಲ್ಲಿ ಪಶ್ಚಿಮ ಆಫ್ರಿಕಾದ ರಾಜಕೀಯ ನಾಯಕ ಎಲ್ ಹಡ್ಜ್ ಉಮರ್ ಟಾಲ್ ಸೆಗೌ ನಗರವನ್ನು ವಶಪಡಿಸಿಕೊಂಡರು, ಮಾಲಿಯ ಬಂಬಾರ ಸಾಮ್ರಾಜ್ಯವನ್ನು ನಾಶಪಡಿಸಿದರು.

1920 ರಲ್ಲಿ ಬ್ರಿಟಿಷ್ ಸಂಸತ್ತು ಹೋಮ್ ರೂಲ್ ಕಾಯ್ದೆಯನ್ನು ಅಂಗೀಕರಿಸಿತು, ಐರ್ಲೆಂಡ್ ಅನ್ನು ಎರಡು ಭಾಗಗಳಾಗಿ ವಿಂಗಡಿಸಿತು; ದಕ್ಷಿಣದ ಕೌಂಟಿಗಳು ಇದನ್ನು ತಿರಸ್ಕರಿಸಿದವು, ಅಲ್ಲಿ ಆಂಗ್ಲೋ-ಐರಿಶ್ ಯುದ್ಧವು ಒಂದು ವರ್ಷದವರೆಗೆ ಮುಂದುವರಿಯಿತು.

1945: ಎರಡನೇ ಮಹಾಯುದ್ಧದ ಅತ್ಯಂತ ಭೀಕರ ವಾಯುದಾಳಿ , ರಾತ್ರಿಯ ಬಿ-29 ಬಾಂಬ್ ದಾಳಿಯ ನಂತರ ಟೋಕಿಯೊಗೆ ಬೆಂಕಿ ಹಚ್ಚಿತು; 1 ಲಕ್ಷಕ್ಕೂ ಹೆಚ್ಚು ಜನರು ಸಾವನ್ನಪ್ಪಿದರು, ಹೆಚ್ಚಾಗಿ ನಾಗರಿಕರು.

1952 ರ ಕ್ಯೂಬಾದಲ್ಲಿ ಜನರಲ್ ಫುಲ್ಜೆನ್ಸಿಯೊ ಬಟಿಸ್ಟಾ ನೇತೃತ್ವದಲ್ಲಿ ಮಿಲಿಟರಿ ದಂಗೆ

2000ನೇ ಇಸವಿಯ ಸಂಯೋಜಿತ ಷೇರು ಮಾರುಕಟ್ಟೆ ಸೂಚ್ಯಂಕವು 5132.52 ಕ್ಕೆ ತಲುಪಿತು, ಇದು ಡಾಟ್-ಕಾಮ್ ಉತ್ಕರ್ಷದ ಅಂತ್ಯದ ಆರಂಭವನ್ನು ಸೂಚಿಸುತ್ತದೆ.


# ದಾನ ಹಾಗೂ ಧ್ಯಾನ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ : ಇತ್ತೀಚಿನ ದಿವಸಗಳಲ್ಲಿ ದಾನ ಹಾಗೂ ಧ್ಯಾನ ಮಾಡುವವರ ಸಂಖ್ಯೆ ಕಡಿಮೆಯಾಗುತ್ತಿದೆ ಹಾಗಾಗಿ ಉದ್ದಿಮೆ ಮಾಡುತ್ತಿರುವವರು ದಾನ ಮಾಡಲು ಮುಂದಾಗಬೇಕು ಇದರಿಂದ ಮನಸ್ಸಿಗೆ ನೆಮ್ಮದಿ ಕೊಂಡುಕೊಳ್ಳಬಹುದಾಗಿದೆ ಎಂದು ನಿವೃತ್ತಿ ಶಿಕ್ಷಕ ಮಹದೇವಶಾಸ್ತ್ರಿ ತಿಳಿಸಿದರು.

ಪಟ್ಟಣದ ಖಾಸಗಿ ಹೋಟೆಲ್‌ನಲ್ಲಿ ಬಾಗೂರು ಸರ್ಕಾರಿ ಪ್ರೌಢಶಾಲೆ 1994-95 ನೇ ಸಾಲಿನ ವಿದ್ಯಾರ್ಥಿಗಳ ಗುರುವಂದನೆ ಹಾಗೂ ಸ್ನೇಹ ಮಿಲನ ಸಂಭ್ರಮ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಗೌರವ ಸ್ವೀಕರಿಸಿ ಅವರು ಮಾತನಾಡಿದರು, ವಿದ್ಯಾರ್ಥಿಗಳು ಗುರುಗಳಿಗೆ ಗೌರವ ತರಬೇಕೆಂದರೆ ಸಮಾಜಕ್ಕಾಗಿ ತಮ್ಮನ್ನು ಅರ್ಪಿಸಿಕೊಳ್ಳಬೇಕು ದಾನ ಮಾಡಬೇಕು, ನಿಮ್ಮಗಳ ಮನಸ್ಸಿನ ನೆಮ್ಮದಿಗಾಗಿ ಧ್ಯಾನ ಮಾಡಬೇಕು ಎಂದರು.

ಎರಡು ದಶಕಗಳ ಹಿಂದೆ ಶಿಕ್ಷಣದ ಜೊತೆಯಲ್ಲಿ ಶಾಲೆಗಳಲ್ಲಿ ನೀತಿ ಕತೆಗಳನ್ನು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರಿಂದ ಸ್ವಾರ್ಥಸಮಾಜ ಇರಲಿಲ್ಲ ಅಂದು ಶಿಕ್ಷಕರಿಗೆ ನೀಡುವ ಗೌರವ ಇತ್ತೀಚಿನ ದಿವಸಗಳಲ್ಲಿ ಇಲ್ಲದಂತಾಗಿದೆ, ಗುರು ಶಿಷ್ಯರ ಸಂಬಂಧ ಸಾಕಷ್ಟು ಹಾಳಾಗಿದೆ, ಗುರುವಿನಲ್ಲಿ ದೇವರ ಕಾಣುವ ಕಾಲ ಬದಲಾಗಿದೆ ಗುರುವಿನೊಂದಿಗೆ ಆತ್ಮೀಯತೆ ಬೆಳೆಸಿಕೊಂಡು ಗರು ಶಿಷ್ಯರು ಒಟ್ಟಾಗಿ ಸಾಕಷ್ಟು ಅನಚಾರಗಳು ಮಾಡುವಂತೆ ಘಟನೆಗಳು ಬೆಳಕಿಗೆ ಬಂದಿವೆ ಎಂದರು.



ಇತ್ತೀಚಿನ ದಿವಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರಾರಂಭವಾಗಿ ಮೌಲ್ಯಯುತ ಶಿಕ್ಷಣಕ್ಕಿಂತ ಅಂಕಗಳಿಕೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ, ಗುಣಕ್ಕೆ ಬೆಲೆ ಇಲ್ಲ ಹಣವಂತರಿಗೆ ಮಾತ್ರ ಈ ಜಗತ್ತಿನಲ್ಲಿ ಬೆಲೆ ನೀಡಲಾಗುತ್ತಿದೆ ಹಾಗಾಗಿ ಸಾಕಷ್ಟು ಅನಾಚಾರಗಳು ನಡೆಯುತ್ತಿವೆ,

ಎಲ್ಲಿ ಸಜ್ಜನರಿಗೆ, ಹೃದಯವಂತರಿಗೆ, ಗುಣವಂತರಿಗೆ ಬೆಲೆ ನೀಡುತ್ತೇವೆ ಅಂದು ನಾವು ಪಡೆದ ಶಿಕ್ಷಣಕ್ಕೆ ಬೆಲೆ ಇರುತ್ತಿದೆ ನಿಮ್ಮ ಗುರುಗಳಿಗೂ ಹೆಸರು ಬರುತ್ತದೆ ಎಂದು ಹೇಳಿದರು.

ನಿವೃತ್ತ ಶಿಕ್ಷಕ ಶ್ರೀನಿವಾಸ್ ಮಾತನಾಡಿ, ಕಷ್ಟದಲ್ಲಿ ಇದ್ದವರಿಗೆ ಸಹಕಾರ ನೀಡಬೇಕು, ಅಂದು ನಾವು ಶಿಕ್ಷಣ ವಂತರಾಗಿದ್ದಕ್ಕೂ ಸಾರ್ಥಕವಾಗುತ್ತದೆ, ಸಹಾಯ ಮಾಡಿದನ್ನು ಪ್ರಚಾರಕ್ಕೆ ಬಳಸಿಕೊಳ್ಳಬಾರದು, ಸಾಕಷ್ಟು ಮಂದಿ ಪ್ರಚಾರಕ್ಕಾಗಿಯೇ ಸಹಾಯ ಮಾಡುತ್ತಾರೆ, ರಸ್ತೆ ಅಪಘಾತದಲ್ಲಿ ಸಾವು ಬದುಕಿನ ನಡುವೆ ಹೋರಾಟ ಮಾಡುವವ ರಕ್ಷಣೆ ಮಾಡಿದನ್ನು ಸ್ವಾರ್ಥಕ್ಕಾಗಿ ಪ್ರಚಾರಕ್ಕಾಗಿ ಬಳೆಕ ಮಾಡಿಕೊಳ್ಳುವ ಕಾಲ ಬಂದಿದೆ ಎಂದು ಕಳವಳ ವ್ಯಕ್ತ ಪಡಿಸಿದರು.

ಬದುಕಿನಲ್ಲಿ ಸಂತೋ್ರಷ ಹಾಗೂ ದುಖಃ ಎರಡನ್ನೂ ಸಮನಾಗಿ ಸ್ವೀಕರಾ ಮಾಡಿ ದಾಂಪತ್ಯದಲ್ಲಿ ಸಣ್ಣ ಪುಟ್ಟ ತಪ್ಪುಗಳಿಂದ ಬಿರುಕು ಬರುತ್ತದೆ ಹಾಗಾಗಿ ಸೋಲು ಗೆಲುವು ಎರಡನ್ನೂ ಸಮನಾಗಿ ಸ್ವೀಕಾರ ಮಾಡುವುದನ್ನು ರೂಡಿಸಿಕೊಂಡರೆ ಬದುಕು ನೆಮ್ಮದಿಯಾಗಿ ಇರುತ್ತದೆ, ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಸಾಲದು ಸಂಸ್ಕಾರ ಕೊಡಲು ಪೋಷಕರು ಮುಂದಾಗಬೇಕು ಎಂದು ಹಳೆವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಹಳೆ ವಿದ್ಯಾರ್ಥಿ ದೇವಾರಾಜು ಮಾತನಾಡಿ, ಪೋಷಕರು ಜನ್ಮ ಕೊಟ್ಟರೆ ಗುರುಗಳು ದಾರಿ ತೋರಿಸಿದ್ಧಾರೆ ಅವರು ತೋರಿಸಿದ ಮಾರ್ಗದಲ್ಲಿ ಸಾಗಿದ್ದರಿಂದ ಇಂದು ನಾವು ಮಹಾನಗರಗಳಲ್ಲಿ ಸ್ವಂತ ಉದ್ದಮೆ ಇಲ್ಲವೆ ಉದ್ಯೋಗ ಮಾಡುತ್ತಿದ್ದೇವೆ, ಹಣವಂತರಾಗಿರುವರು ತಮ್ಮ ಗುರುಗಳನ್ನು ನೆನಪು ಮಾಡಿಕೊಳ್ಳುವುದನ್ನು ರೂಡಿಸಿಕೊಳ್ಳಬೇಕು ಎಂದರು.

ಶಿಕ್ಷಕರಾದ ಶಿವಪ್ಪ, ಸೋರ್ಯನಾರಾಯಣ, ಚಂದ್ರಶೇಖರ್, ಸತೀಶ್, ಚನ್ನಪ್ಪ, ದೇವರಾಜು, ಹಿರಿಯಣ್ಣ, ಮಂಜಪ್ಪ, ತಿಮ್ಮೇಗೌಡ, ಗೋವಿಂದಪ್ಪ, ಅಲ್ಗೇಗೌಡ, ರಾಮಸ್ವಾಮಿ, ಸೋಮಶೇಖರ್, ರಂಗಸ್ವಾಮಿ ಇವರನ್ನು ಹಳೆವಿದ್ಯಾರ್ಥಿಗಳು ಸನ್ಮಾನಿಸಿ ಗೌರವಿಸಿದರು. ಹಳೆವಿದ್ಯಾರ್ಥಿಗಳಾಗ ಮರುವನಹಳ್ಳಿ ದೇವರಾಜು, ಬಿ.ಎಸ್.ಮಂಜಪ್ಪ, ಪಂಕಜ, ಕೃಷ್ಣಪ್ರಕಾಶ್, ದಿನೇಶ್, ಪರಮೇಶ್ ಗುರುವಂದನಾ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

# ಅಭಿರುಚಿ ಕೆಟ್ಟರೆ ಸುಧಾರಿಸಲು ಸಾಧ್ಯವಿಲ್ಲ : ಶಿವಾನಂದ ಶಿವಾಚಾರ್ಯ ಸ್ವಾಮೀಜಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ : ರುಚಿ ಕೆಟ್ಟರೆ ಸುಧಾರಿಸಬಹುದು, ಆದರೆ ಅಭಿರುಚಿ ಕೆಟ್ಟರೆ ಸುಧಾರಿಸಲು ಸಾಧ್ಯವಿಲ್ಲ, ಯುವ ಸಮುದಾಯ ತಮ್ಮ ವಿದ್ಯಾರ್ಥಿ ಬದುಕಿನಲ್ಲಿ ಅಭಿರುಚಿ ಅವ್ಯಾಸಗಳನ್ನು ಅಳವಡಿಸಿಕೊಳ್ಳಬೇಕು ಎಂದು ತುಮಕೂರು ಸುಕ್ಷೇತ್ರ ಹಿರೇಮಠ ತಪೋವನ ಡಾ ಶ್ರೀ ಶಿವಾನಂದ ಶಿವಾಚಾರ್ಯ ಮಹಾ ಸ್ವಾಮೀಜಿ ಅವರು ಅಭಿಪ್ರಾಯಪಟ್ಟರು.

ನಗರದ ಗಂಧದಕೋಟಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಚುಟುಕು ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಲಾಗಿದ್ದ ಹಾಸನ ತಾಲ್ಲೂಕು ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಪದಗ್ರಹಣ, ಗಿರಿಜಾ ನಿರ್ವಾಣಿ ಯವರ ಸ್ವರಚಿತ ಕೃತಿ ಚುಟುಕುಯಾನ, ಸೀತಾ ಲಕ್ಷ್ಮಿ ವರ್ಮ ಸಂಪಾದಿತ ಅರಸು ಚುಟುಕು ಚಿತ್ತಾರಗಳು, ಕಿರಣ್ ಕುಮಾರ್ ಬಿ ಸ್ವರಚಿತ ಕೃತಿ ಚುಟುಕಾಮೃತ ಲೋಕಾರ್ಪಣೆ, ಡಾ.ಎಂ ಅಕಬರ್ ಅಲಿಯವರ ಶತಮಾನೋತ್ಸವ, ಚುಟುಕು ಕೌಸ್ತುಭ ರಾಜ್ಯ ಪ್ರಶಸ್ತಿ ಪ್ರಧಾನ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದರು.



Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248